privilege or something else but right now I am concerned with the notice Shri Kharge has given. I will consider it and I will certainly— I have taken the sense of this House and I will give a ruling on this.

SRI K. B. KOLIWAD.—Before giving the ruling, I would like to say. ಶ್ರೀಮಾನ್ ಹೆಗಡೆಯವರ ಸ್ಟೇಟ್‌ಮೆಂಟ್‌ನಿಂದ ಕರ್ನಾಟಕ ಸರ್ಕಾರದ ಮೇಲೆ ಸಂಶಯ ಪಡತಕ್ಕಂಥ ಪರಿಸ್ಥಿತಿ ಇರುವಾಗ ಮತ್ತು ಈ ಪರಿಸ್ಥಿತಿಯನ್ನು, ನಾವು ಕರ್ನಾಟಕ ರಾಜ್ಯದ ಜನತೆಗೆ ಸರ್ಕಾರದ ನಿಲುವನ್ನು ತಿಳಿಸಿ ಕೊಡತಕ್ಕಂಥದ್ದು ನಮ್ಮ ಕರ್ತವ್ಯ. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನ ಮಾಡಿದರು. ಕರ್ನಾಟಕ ಸರ್ಕಾರದ ಪಾತ್ರ ಇದರಲ್ಲಿ ಏನೂ ಇಲ್ಲ ಎನ್ನತಕ್ಕಂಥದ್ದನ್ನು ಹೇಳಿದರು. ಈಗ ಜನರಿಗೆ ಒಂದು ಕನ್‌ಫ್ಯೂಷನ್ ಆಗಿಬಿಟ್ಟಿದೆ. ಲೂಜ್ ಶೀಟ್‌ಗಳನ್ನು ಫೈಲ್‌ನಲ್ಲಿ ತುರುಕಿದ್ದಾರೆ ಎಂದು ಕರ್ನಾಟಕ ಸರ್ಕಾರದ ಮೇಲೆ ಗೂಬೆ ಕೂರಿಸತಕ್ಕಂಥ ಒಂದು ಕೆಲಸ ಆಗಿದೆ. I request the Chair Kindly to permit the Hon. Minister to make the statement regarding the stand of the Government before giving the ruling.

ANNOUNCEMENT

MR. SPEAKER.—I am very happy to inform the Hon. Members that Shri Joythirmay Nath, Hon'ble Speaker of the Tripura Legislative Assembly and Mrs. Jyotirmay Nath are present here in the Gallery. On your behalf and on my behalf I extend a very hearty welcome to them.

ರಾಜ್ಯದ ಕೆಲವು ಭಾಗಗಳಲ್ಲಿ ಅತಿವೃಷ್ಟಿಯಿಂದ ಜನರಿಗೆ ತೊಂದರೆಯಾಗಿರುವುದು

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯಲ್ಲಿ ಸತತವಾಗಿ ಬಿದ್ದ ಮಳೆಯಿಂದ ಬಹಳ ಜನರಿಗೆ ತೊಂದರೆಯಾಗಿದೆ, ಅಸ್ತವ್ಯಸ್ತವಾಗಿದೆ. ಈ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಇವತ್ತು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ. ಅಲ್ಲಿ ಬಹಳ ಮಳೆಯಾದ ಕಾರಣ ಜನರಿಗೆ ಬಹಳ ತೊಂದರೆಯಾಗಿದೆ, ಎಲ್ಲ ಕಡೆ ಸೇತುವೆ ಬಿದ್ದು ಹೋಗಿದೆ, ಯಾದ್ಗೀರ್‌ನಲ್ಲೂ ಆಗಿದೆ. ಈ ತರಹದ ಘಟನೆ ಅಲ್ಲಿ ಅದಕಾರಣ ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ನಾನು ಮನವಿಮಾಡಿಕೊಳ್ಳುತ್ತಾ ಇದ್ದೇನೆ. ಮಳೆಯಿಂದ ಜನರಿಗೆ ಏನು ತೊಂದರೆಯಾಗಿದೆ ಅವರಿಗೆ ಪರಿಹಾರ ಕೊಡಬೇಕು. ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳನ್ನು ಅಲ್ಲಿ ಕಳಿಸಿಕೊಟ್ಟರೆ ಅವರು ಸ್ಥಳದಲ್ಲಿ ಹೋಗಿ ಏನೇನು ಅನಾನುಕೂಲತೆಯಾಗಿದೆ ಅದನ್ನು ನೋಡಿ ನಿವಾರಣೆ ಮಾಡುವುದಕ್ಕೆ ಅನುಕೂಲ ವಾಗುತ್ತದೆ.

ಶ್ರೀ ವೀರೇಂದ್ರಪಾಟೀಲ್.— ಇದಕ್ಕೆ ಚರ್ಚೆ ಬೇಡ. ಮಾನ್ಯ ಸದಸ್ಯರು ಈಗ ಗುಲ್ಬರ್ಗ ಮತ್ತು ಬೀದರ್‌ನಲ್ಲಿ ಅತಿವೃಷ್ಟಿಯಿಂದ ಮನೆಗಳು, ರಸ್ತೆಗಳು ಬಹಳಮಟ್ಟಿಗೆ ಹಾಳಾಗಿವೆ ಎಂದು ಏನು ಹೇಳಿದ್ದಾರೆ, ಆ ಸುದ್ದಿ ನನಗೂ ಬಂದಿದೆ. ಆ ಭಾಗದಲ್ಲಿ ಸಾಮಾನ್ಯವಾಗಿ ಹೆಚ್ಚು ಮಳೆ ಆಗುವಹಾಗಿಲ್ಲ ಅಂತಹ ಒಂದು ಪರಿಸ್ಥಿತಿ ಇದ್ದಾಗ ಬಹುಶ: ಈ ಮಳೆ ಆಗಿದ್ದು ಕ್ಲೌಡ್ಸ್ ಬರ್ಸ್ಟ್‌ನಿಂದ ಮಳೆಯಾಯಿತೆಂತೆ ಕಾಣಿಸುತ್ತದೆ. ಇನ್ನೂ ನನಗೆ ವಿವರಗಳು ಬಂದಿಲ್ಲ. ಆದಕ್ಕಾಗಿ ಇದೀಗ ನನ್ನ ಸಹೋದ್ಯೋಗಿ ಗಳಾದಂಥ ಪುಟ್ಟಸ್ವಾಮಿಗೌಡರ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಅವರು ಇವತ್ತು ಸಾಯಂಕಾಲ ಹೈದರಾಬಾದ್‌ಗೆ ಹೋಗಿ, ಹೈದರಾಬಾದ್ ನಿಂದ ನಾಳೆ ಬೀದರ್‌ಗೆ ಹೋಗಿ ನಾಡಿದ್ದು ಗುಲ್ಬರ್ಗ ಕಡೆಗೆ ಹೋಗಿ, ಸ್ವತ: ಪರಿಸ್ಥಿತಿಯನ್ನು ಅಧ್ಯಯನ ಮಾಡಿ ತಿಳಿದುಕೊಂಡು, ಆ ಭಾಗದಲ್ಲಿ ರುವಂಥ ರಸ್ತೆಗಳ ರಿಪೇರಿಯಾಗಲಿ ಅಥವಾ ತೊಂದರೆಗೆ ಒಳಗಾದಂಥ ಜನರಿಗಾಗಲಿ ಅಥವಾ ಮತ್ತಾವ ರೀತಿಯಿಂದಲಾದರೂ ಹಾನಿಯಾಗಿದ್ದರೆ ಅದನ್ನು ಯಾವರೀತಿಯಿಂದ ಸರಿಪಡಿಸಬಹುದು ಎನ್ನುವಂಥ ಪೂರ್ತಿ ಅಧಿಕಾರ ಅವರು ಇಟ್ಟುಕೊಂಡು ಹೋಗುತ್ತಾ ಇದ್ದಾರೆ. ಎಲ್ಲೆಲ್ಲಿ ರಸ್ತೆಗಳ ರಿಪೇರಿ, ಮತ್ತೊಂದು ರಿಪೇರಿ ಮಾಡಬೇಕಾಗಿದೆಯೋ ಅದನ್ನು ನೋಡಿ ಸ್ಥಾನಿಕವಾಗಿ ನೀವು ಅಧಿಕಾರಿಗಳಿಗೆ ಆರ್ಡರ್ ಕೊಟ್ಟು ಅದನ್ನು ಸರಿಪಡಿಸಬೇಕು ಎಂದು ಅವರಿಗೆ ಹೇಳಿದ್ದೇನೆ. ಇವತ್ತು ಸಾಯಂಕಾಲ

ಅವರು ಹೋಗುತ್ತಾರೆ. ಬಹುಶ: ಬಂದ ಮೇಲೆ ಅವರಿಗೆ ಒಂದುವೇಳೆ ಮನಸ್ಸು ಇದ್ದರೆ ಒಂದು ವರದಿ ಕೂಡ ಸದನಕ್ಕೆ ಸಲ್ಲಿಸುತ್ತಾರೆ.

ಶ್ರೀ ಬಸವರಾಜ್ ಹಾವಗಪ್ಪ ಪಾಟೀಲ್.— ಅಲ್ಲಿ ದನಕರುಗಳಿಗೂ ಅನುಕೂಲ ಮಾಡಿದರೆ ಒಳ್ಳೆಯದು.

ಶ್ರೀ ವೀರೇಂದ್ರಪಾಟೀಲ್.— ನಾನು ಹೇಳಿದ್ದೇನೆ. ಏನೇನು ಅನಾಹುತವಾಗಿದೆ, ಯಾರು ಹಾನಿಗೆ ಒಳಗಾಗಿದ್ದಾರೆ, ಯಾರು ಸತ್ತಿದ್ದಾರೆ ಅವರಿಗೆ ಏನು ಪರಿಹಾರ ಕೊಡಬೇಕು ಎನ್ನುವಂಥ ಫುಲ್ ಅಥಾರಿಟಿಯೆಂನ್ನು ಪಿಡ್ಲ್ಯೂಡಿ ಮಿನಿಸ್ಟರ್‌ಗೆ ಕೊಟ್ಟಿದ್ದೇನೆ. ಅವರು ಹೋಗುತ್ತಾರೆ. ಮಾಡುತ್ತಾರೆ.

ಶ್ರೀ ಬಿ.ಎಂ. ಇದಿನಬ್ಬ.— ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ ಚಿನ್ನಾಗಿ ಮಳೆಯಾಗ ತಕ್ಕಂಥ ಜಾಗ, ಆದರೂ ಕೂಡ ಅಲ್ಲಿ ನಾಲ್ಕು ದಿವಸಗಳಿಂದ ಭಯಂಕರವಾದಂಥ ತೂಫಾನ್ ಬಂದು ಬಹಳ ಹಾನಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ದಿವಸಗಳಲ್ಲಿ ರಾತ್ರಿ ಹಗಲೆನ್ನದೆ ಅತ್ಯದ್ಭುತವಾದಂಥ ಮಳೆ ಬಂದು ಅಸ್ತವ್ಯಸ್ತವಾಗಿದೆ, ಮಂಗಳೂರಿನಲ್ಲಿ ಅಸ್ತವ್ಯಸ್ತವಾಗಿದೆ, ತುಂಬ ಹಾನಿಯಾಗಿದೆ ಎಂದು ನಮಗೆ ವರದಿಗಳು ಬಂದಿವೆ. ಆದುದರಿಂದ ಇದನ್ನೂ ಕೂಡ ಅದರ ಜೊತೆಯಲ್ಲಿ ಜೋಡಿಸಿ ಅಲ್ಲೂ ಕೂಡ ಮಾನ್ಯ ಮಂತ್ರಿಗಳು ನೋಡುವಂಥ ಒಂದು ವ್ಯವಸ್ಥೆಯಾಗಬೇಕು.

ಶ್ರೀ ಪಾಟೀಲ್ ನಾಗರಾಜ್.— ಈ ಅತಿವೃಷ್ಟಿಯಿಂದ ಸಂತ್ರಿರತಕ್ಕಂಥ ಜನಗಳು ಎಷ್ಟು ? ಅವರಿಗೆ ಈಗಾಗಲೇ ಸರ್ಕಾರ ಘೋಷಣೆ ಮಾಡಿದ ಪರಿಹಾರವೆಷ್ಟು ? ಮಂತ್ರಿಗಳು ಹೋಗುತ್ತಾರೆ, ಆದು ಬೇರೆ ವಿಚಾರ. ಈಗ ತಮಗೆ ಬಂದಿರತಕ್ಕ ವರದಿ ಪ್ರಕಾರ ಎಷ್ಟು ಜನ ಸತ್ತಿದ್ದಾರೆ. ಈಗಾಗಲೇ ಸರ್ಕಾರ ಅವರಿಗೆ ಏನೇನು ಕಾರ್ಯಕ್ರಮ ಕೈಗೊಂಡಿದೆ ಎನ್ನುವುದನ್ನು ದಯಮಾಡಿ ಸಭೆಗೆ ತಾವು ಹೇಳಬೇಕು.

ಅಧ್ಯಕ್ಷರು.— ಇನ್ನೂ ವರದಿ ಬಂದಿಲ್ಲ, ಮಂತ್ರಿಗಳು ಹೋಗುತ್ತಾ ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಅತಿವೃಷ್ಟಿ ಅಷ್ಟೇಅಲ್ಲ,ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಯಲ್ಲಿ ಮಲೆನಾಡು ಜಿಲ್ಲೆಗಳಲ್ಲಿ ವಿಚಿತ್ರವಾಗಿ ಮಳೆ ಬಂದುದರಿಂದ ಅನೇಕ ಜನರಿಗೆ ತೊಂದರೆಯಾಗಿದೆ. ಈಗ ಗುಲ್ಬರ್ಗದಲ್ಲಿ ಮಳೆ ಬಂದು ತೊಂದರೆಯಾಗಿರುವುದರಿಂದ ಗುಲ್ಬರ್ಗ ಜಿಲ್ಲೆಗೆ ಮಂತ್ರಿಗಳು ಹೇಗೆ ಹೋಗುತ್ತಿದ್ದಾರೋ ಹಾಗೆಯೇ ಆದು ಮಲೆನಾಡು ಪ್ರದೇಶವಾಗಬಹುದು, ದಕ್ಷಿಣ ಕನ್ನಡ ಜಿಲ್ಲೆ ಆಗಬಹುದು, ಶಿವಮೊಗ್ಗ ಜಿಲ್ಲೆ ಆಗಬಹುದು, ಉತ್ತರ ಕನ್ನಡ ಜಿಲ್ಲೆ ಆಗಬಹುದು ಅಲ್ಲಿಗೂ ಕೂಡ ಜನ ಹೋಗಿ ಅಲ್ಲಿ ಲುಕ್ಸಾನು ಆಗರತಕ್ಕದ್ದನ್ನು ದಯವಿಟ್ಟು ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಕಳಿಸಿಕೊಟ್ಟರೆ ನಮಗೂ ಕೂಡ ಸಹಾಯವಾಗುತ್ತದೆ.

ಅಧ್ಯಕ್ಷರು.— ಜನ ಕಳುಹಿಸಿದರೆ ಪ್ರಯೋಜನವಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಅಲ್ಲ ಅಧ್ಯಕ್ಷರೆ, ಮಂತ್ರಿಗಳು ಹೋಗಬೇಕು. ಗುಲ್ಬರ್ಗಕ್ಕೆ ಆ ಮಂತ್ರಿಗಳು ಹೋಗಿಬಿಟ್ಟರೆ ಬಾಕಿ ಜಿಲ್ಲೆಗಳಿಗೆ ಏಕೆ ಹೋಗಬಾರದು.

ಅಧ್ಯಕ್ಷರು.— ಜನ ಅಂದ್ರಲ್ಲ, ಅದಕ್ಕೆ ಹೇಳಿದೆ, ಕಳುಹಿಸುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ಮುಖ್ಯ ಮಂತ್ರಿಗಳು ಇಲ್ಲಿಯೇ ಇರುವುದರಿಂದ ನಾನು ಹೇಳುತ್ತೇನೆ. ನಮ್ಮ ಕಡೆ ಇವತ್ತು ಬಹಳ ಹಾನಿಯಾಗಿದೆ. ಜಿಲ್ಲಾಧಿಕಾರಿಗಳಾದರೂ ಭೇಟಿ ಕೊಟ್ಟು ವರದಿ ಕಳಿಸಲಿ.

ಶ್ರೀ ಎಸ್.ಹೆಚ್. ಕೌಜಲಗಿ. ಆದೇ ಪ್ರಕಾರ ಬೆಳಗಾಂ ಜಿಲ್ಲೆಯಲ್ಲಿಯೂ ಹಾನಿಯಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನಾಗಮಂಗಲದಲ್ಲಿ ಅತಿವೃಷ್ಟಿಯೂಗಿಲ್ಲ. ಅನಾವೃಷ್ಟಿಯಿಂದ ಕುಡಿಯುವ ನೀರಿಗೆ ತೊಂದರೆಯಾಗಿದೆ. ಬೋರ್‌ವೆಲ್‌ಗಳನ್ನು ಹಾಕಬೇಕೆಂದು ತಿಳಿಸಿದ್ದೇವೆ. ಅಲ್ಲಿಗೂ ಯಾರನ್ನಾದರೂ ಕಳುಹಿಸಿಕೊಟ್ಟು ಸಮಸ್ಯೆ ಬಗೆಹರಿಸಲಿ.

ಶ್ರೀ ವೀರೇಂದ್ರ ಪಾಟೀಲ್ — ಒಂದು ತಪ್ಪು ಅಭಿಪ್ರಾಯ ಮಾಡಬಹುದು. ಬಹುಶ: ಗುಲ್ಬರ್ಗ ಅಂದರೆ, ಮುಖ್ಯ ಮಂತ್ರಿಗಳ ಜಿಲ್ಲೆ ಇರುವುದರಿಂದ ಕಳುಸುತ್ತಾರೆಂಬ ತಪ್ಪು ಅಭಿಪ್ರಾಯ ಮೂಡಬಹುದು. ನಾನು ಮೊದಲೇ ಹೇಳಿದೆ ಸಾಮಾನ್ಯವಾಗಿ ಆ ಭಾಗದಲ್ಲಿ ಮಳೆ ಬರುವುದೇ ಇಲ್ಲ. ಈಗ ಇಷ್ಟು ದೊಡ್ಡ ಪ್ರಮಾಣದಲ್ಲಿ ಮಳೆ ಬಂದಿರುವಾಗ ಆ ವೇಳೆಯಲ್ಲಿ ಸ್ವಲ್ಪ ಮಟ್ಟಿಗೆ ಅನಾಹುತವಾಗಿರುತ್ತದೆ. ಇವತ್ತು ಟೆಲಿಫೋನ್ ಮೇಲೆ ಟೆಲಿಫೋನ್ ಬರುತ್ತಿತ್ತು. ನಾನು ಹೋಗುವುದಕ್ಕಾಗು

ವುದಿಲ್ಲ. ಏಕೆಂದರೆ ಇವತ್ತು ನಾನು ಬಾಂಬೆಗೆ ಹೋಗುತ್ತಿದ್ದೇನೆ. ನಾಳೆ ಅಲ್ಲಿ ಕೊಂಕಣ ರೈಲ್ವೆ ಬಗ್ಗೆ ಅಗ್ರಿಮೆಂಟ್ ಮೇಲೆ ಚರ್ಚೆ ಮಾಡುವುದು ಇದೆ. ಎನ್.ಡಿ.ಸಿ. ಮೀಟಿಂಗ್ ಇದೆ. ಆದಕ್ಕಾಗಿ ನನ್ನ ಸಹೋದ್ಯೋಗಿಗಳಿಗೆ ಅಲ್ಲಿಗೆ ಹೋಗಿ ನೋಡಿ ಕೊಂಡು ಬನ್ನಿ ಎಂದು ಹೇಳಿದೆ ಏಕೆಂದರೆ ಆ ಭಾಗದಲ್ಲಿ ಮಂತ್ರಿಗಳು ಸುತ್ತಾಡುವುದೇ ಕಡಿಮೆ. ನಿಮ್ಮ ಕಾಲಕ್ಕೆ ಎಷ್ಟು ಜನ ಹೋಗಿ ಬಂದಿದ್ದಾರೋ ಗೊತ್ತಿಲ್ಲ. ಇಲ್ಲಿಂದ ಮಂತ್ರಿಗಳು ಅಲ್ಲಿಗೆ ಹೋದರೆ ಕರ್ನಾಟಕದ ರಾಜಧಾನಿಯಿಂದ ಯಾರೋ ನಮ್ಮ ಕಷ್ಟವನ್ನು ಕೇಳುವುದಕ್ಕೆ ಬಂದಿದ್ದಾರೆನ್ನುವ ಭಾವನೆ ಅವರಲ್ಲಿ ಬರುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು, ಸತ್ತಿರತಕ್ಕವರಿಗೆ ಎಷ್ಟು ಪರಿಹಾರ ಕೊಟ್ಟಿದ್ದೀರಿ. ಏನು ಕೇಳಿದರು ಅವರು ಹೋಗುತ್ತಾರೆ,ಅವರಿಗೆ ಸಂಪೂರ್ಣವಾದ ಅಧಿಕಾರವನ್ನು ನಾವುಕೊಟ್ಟಿದ್ದೇವೆ ಯಾರು ಯಾರಿಗೆ ಏನೇನು ಕೊಡಬೇಕೋ ಅದನ್ನು ಕಾನೂನು ಪ್ರಕಾರ, ರೂಲ್ಸ್ ಪ್ರಕಾರ ಕೊಟ್ಟು ವ್ಯವಸ್ಥೆ ಮಾಡಿ ಬರುತ್ತಾರೆ. ಮಾನ್ಯ ಇದಿನಬ್ಬನವರು ಹಾಗೂ ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮ ಭಾಗದಲ್ಲಿ ಬಹಳ ವರ್ಷಗಳಿಗೆ ಅನಾಹುತವಾಗಿದೆಯೆಂದು ಹೇಳಿದ್ದಾರೆ. ನಾವು ಡೆಪ್ಯುಟಿ ಕಮಿಷನರನ್ನು ಸಂಪರ್ಕ ಮಾಡಿ ಹೆಚ್ಚು ಅನಾಹುತವಾಗಿದೆ, ಯಾರಾದರೂ ಇಲ್ಲಿಂದ ಹೋಗುವಂಥ ಪರಿಸ್ಥಿತಿ ಇದ್ದರೆ, ಯಾರಾದರೂ ಹೋಗಿಬರಲೆಂದು ನನ್ನ ಸಹೋದ್ಯೋಗಿಗಳಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಮೊದಲು ನಾನು ಡೆಪ್ಯುಟಿ ಕಮಿಷನರಿಂದ ವರದಿ ಪಡೆದ ಮೇಲೆ ಮುಂದೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇನೆ.

ಗಮನ ಸೆಳೆಯುವ ಸೂಚನೆ

೧ ಗ್ರಾಮಾಂತರ ಪ್ರದೇಶದ ಸಾಮಾನ್ಯ ಜನರಿಗೆ ಹಸಿರು ಕಾರ್ಡು ವಿತರಣೆಯಲ್ಲಿ ವಿಳಂಬ ಹಾಗೂ ಪಡಿತರ ಅವ್ಯವಸ್ಥೆಯಿಂದ ತೊಂದರೆಯಾಗಿರುವುದು

ಶ್ರೀಮತಿ ಮೋಟಮ್ಮ.— ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶದ ಸಾಮಾನ್ಯ ಜನರಿಗೆ ಹಸಿರು ಕಾರ್ಡು ವಿತರಣೆಯಲ್ಲಿ ವಿಳಂಬ ಹಾಗೂ ಪಡಿತರ ಅವ್ಯವಸ್ಥೆಯಿಂದ ಆಗಿರುವ ತೊಂದರೆ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ ಗಮನ ಸೆಳೆಯುತ್ತೇನೆ.

†SRI AZEEZ SAIT (Hon'ble Minister for Food and Civil Supplies).— Sir, I wish to make the following statement.

The scheme of subsidised foodgrains for the rural poor was launched on 1-11-1985 for the families whose annual income is less than Rs. 3,500/- and also to include the following categories.—

(1) Landless agricultural labourers, village artisans, plantation labourers;

(2) Marginal farmers, small farmers;

(3) Recepients of the Government Pensions like old-age pension, physially hadicapped persons and widow pensioners; and

(4) Other rural labourers like stone-cutters, etc.

In the first instance the scheme was sanctioned to cover 24 lakh families. Due to verification of beneficiaries, it was found that 6.67 lakh more families were also identified and included in the scheme, Thereafter, 71 Municipalities which were converted into Mandal Panchayats were also brought under the scheme. In the year 1984, 45 semi-urban areas having a population less than 20,000 were also included in the scheme. Thus, a total of 31.67 lakh green cards were issued in the State. The distribution of foodgrains to green card holders was entrusted to the Zilla Parishads during the